# ಬೆಳ್ಳಿತೆರೆಯಲ್ಲಿ ಕಾಮಿಡಿ ಡೇ!

ನಗಿಸೋದು ಬಹಳ ಕಷ್ಟ. ಹಾಗೆಂದೇ ನಗಿಸುವುದರಲ್ಲಿ ಯಶಸ್ವಿಯಾಗಿರುವವರಿಗೆ ಸ್ವತಃ ನಗೋದಕ್ಕೆ ಸಮಯ ಸಿಗೋದೂ ಕಷ್ಟ! ಹಿಂದಿ ಕಿರುತೆರೆಯ 'ಕಾಮಿಡಿ ಕಿಂಗ್' ಕಪಿಲ್ ಶರ್ಮಾನ ಮಟ್ಟಿಗಂತೂ ಈ ಮಾತು ಅಕ್ಷರಶಃ ಸತ್ಯ. ವಾರದ ಕೊನೆಯ ದಿನ ಕಲರ್ಸ್ ಟೀವಿಯಲ್ಲಿ ಕಾಣಿಸಿಕೊಳ್ಳುವ 'ಕಾಮಿಡಿ ನೈಟ್ಸ್ ವಿದ್ ಕಪಿಲ್ ಶರ್ಮಾ' ಕಿರುತೆರೆಯ ಸೂಪರ್‌ಹಿಟ್ ಕಾರ್ಯಕ್ರಮವಾಗಿರುವ ಬೆನ್ನಲ್ಲೇ ಕಪಿಲ್ ಶರ್ಮಾಗೆ ಹಿರಿತೆರೆಯ ಕನಸು ಬಿದ್ದದ್ದು ಆಕಸ್ಮಿಕವಲ್ಲ. ಹಾಗೆ ನೋಡಿದರೆ ಅಮೃತಸರ ಬಿಟ್ಟು ಕಪಿಲ್ ಶರ್ಮಾ ಮುಂಬೈಗೆ ಬಂದದ್ದೇ ಹಿನ್ನೆಲೆ ಗಾಯಕ ಆಗಲೆಂದು. ಗಾಯಕನ ಪಟ್ಟ ಸಿಗಲಿಲ್ಲ. ಆದರೆ ಬಾಲಿವುಡ್‌ನಲ್ಲಿ ಆತನೀಗ ಯಶಸ್ವೀ, 'ನಂಬರ್ ಒನ್' ಸ್ಟ್ಯಾಂಡಪ್ ಕಾಮಿಡಿಯನ್! ಬಾಲಿವುಡ್‌ನ ಸಿನಿಮಾ ಮಂದಿಯ ಎಲ್ಲ ಕಾರ್ಯಕ್ರಮಗಳಿಗೂ ಕಪಿಲ್ ಬೇಕೇ ಬೇಕು. ಹಾಡಲೆಂದು ಬಂದವನು, ಸೂಪರ್‌ಸ್ಟಾರ್‌ಗಳಿಗೇ ಜನಪ್ರಿಯತೆಯಲ್ಲಿ ಪೈಪೋಟಿ ಕೊಡುವ ಮಟ್ಟಕ್ಕೆ ಬೆಳೆದಿದ್ದಾನೆ. ಜನರನ್ನು ನಗಿಸಲು ದುಬೈ, ಯೂರೋಪ್, ಅಮೆರಿಕಕ್ಕೂ ಹಾರುತ್ತಿದ್ದಾನೆ. ಸಮಯಪ್ರಜ್ಞೆಯ ಪಂಚಿಂಗ್ ಡೈಲಾಗ್‌ಗಳು, ಸುಮಧುರ ಕಂಠ ಮತ್ತು ನೋಡಲೂ ಸಾಕಷ್ಟು ಸ್ಫುರದ್ರೂಪಿ ಆಗಿರುವುದು ಕಪಿಲ್‌ನ ಜನಪ್ರಿಯತೆ ದಿಢೀರನೇ ಹೆಚ್ಚಲು ಕಾರಣವಾಗಿವೆ.

ತನ್ನ ಜನಪ್ರಿಯತೆ ಕಿರುತೆರೆಯನ್ನೂ ಮೀರಿ ಬೆಳೆದಿದೆ ಎನ್ನುವುದು ಗೊತ್ತಾದ ಬಳಿಕವೇ, ದೊಡ್ಡ ಪರದೆಯಲ್ಲಿ ಕಾಣಿಸಿಕೊಳ್ಳಲು ಕಪಿಲ್ ನಿರ್ಧರಿಸಿದ್ದು. ಈ ನಿರ್ಧಾರ ಕೈಗೊಂಡದ್ದು 2013ರಲ್ಲಿ. ಆದರೆ ಸಿನಿಮಾದಲ್ಲಿ ನಟಿಸಲು ಪುರುಸೊತ್ತೇ ಸಿಗಲಿಲ್ಲ! ವಾರಕ್ಕೆ ಎರಡು 'ಕಾಮಿಡಿ ನೈಟ್ಸ್' ಶೂಟಿಂಗ್ ಮಾಡೋದರಲ್ಲಿ ಎಲ್ಲ ಸಮಯವೂ ಖರ್ಚು! ಅದರ ಜತೆಗೆ ಅಲ್ಲಲ್ಲಿ ಸಿನಿಮಾ ಅವಾರ್ಡ್ ಫಂಕ್ಷನ್ ನಿರೂಪಣೆ, ವಿವಿಧೆಡೆ ಸ್ಟ್ಯಾಂಡಿಂಗ್ ಕಾಮಿಡಿ ಕಾರ್ಯಕ್ರಮಗಳು ಬೇರೆ.

ಯಶ್‌ರಾಜ್ ಫಿಲಂಸ್ ಸಂಸ್ಥೆಯ ಜತೆಗೆ ಒಟ್ಟು ಮೂರು ಸಿನಿಮಾಗಳಲ್ಲಿ ಹೀರೊ ಆಗಿ ನಟಿಸುವ ಒಪ್ಪಂದ 2013ರಲ್ಲೇ ಆಗಿತ್ತು. 'ಬ್ಯಾಂಕ್ ಚೋರ್' ಎನ್ನುವ ಮೊದಲ ಸಿನಿಮಾ ಶೂಟಿಂಗ್ ಕೂಡಾ ಶುರುವಾಗಿತ್ತು. ಆದರೆ ಅದೇನಾಯಿತೋ, ಸಿನಿಮಾದಿಂದ ಕಪಿಲ್ ಅರ್ಧಕ್ಕೇ ಹೊರಬಿದ್ದ. ಆ ಬಳಿಕ ಉಳಿದ ಎರಡು ಚಿತ್ರಗಳದ್ದೂ ಸುದ್ದಿಯೇ ಇಲ್ಲ. ಇದೀಗ 2015ರಲ್ಲಿ ಕಪಿಲ್‌ನ ಕನಸು ನನಸಾಗಿದೆ. ಈತ ಹೀರೊ ಆಗಿ ಇಬ್ಬರು ಹೀರೋಯಿನ್‌ಗಳ ಜತೆಗೆ ನಟಿಸುತ್ತಿರುವ ಹೊಸ ಹಿಂದಿ ಸಿನಿಮಾ 'ಕಿಸ್ ಕಿಸ್ ಕೊ ಪ್ಯಾರ್ ಕರೂಂ' ಶೂಟಿಂಗ್ ನಡೆದಿದ್ದು ಹೀರೋಯಿನ್‌ಗಳ ಜತೆ ಕ್ಯಾಮೆರಾ ಮುಂದೆ ಈತ ಸಲ್ಲಾಪ ನಡೆಸುತ್ತಿರುವ ಚಿತ್ರಗಳೂ ಪ್ರಕಟವಾಗಿವೆ. ಅಬ್ಬಾಸ್– ಮಸ್ತಾನ್ ನಿರ್ದೇಶನದ ಈ ಚಿತ್ರದಲ್ಲಿ ಕಾಮಿಡಿ ಮತ್ತು ರೊಮ್ಯಾಂಟಿಕ್ ಎರಡೂ ರೀತಿಯ ಪಾತ್ರಪೋಷಣೆ ಇದೆಯಂತೆ.

ಕಾಮಿಡಿ ನೈಟ್ಸ್‌ಗೆ ನಾಲ್ಕು ವಾರ ರಜಾ ಕೊಡಿ ಎಂದು ಟೀವಿ ಚಾನೆಲ್‌ನವರ ಬಳಿ ಕಪಿಲ್ ಕೇಳಿಕೊಂಡಿದ್ದನಂತೆ. ಕಾಮಿಡಿ ನೈಟ್ಸ್‌ಗೆ ಕಪಿಲ್ ಸ್ವತಃ ನಿರ್ಮಾಪಕ ಕೂಡಾ ಆಗಿರುವುದರಿಂದ, ಸಿನಿಮಾ ಕಡೆಗೆ ಮುಖ ಮಾಡಿದರೆ, ಟೀವಿ ಕಾರ್ಯಕ್ರಮ ಹೊಡೆತ ತಿನ್ನುವುದು ಖಚಿತ. ಸಿನಿಮಾ ಏನಾದರೂ ಹಿಟ್ ಆಗದಿದ್ದರೆ, ಮತ್ತೆ ಟೀವಿಗೆ ಮರಳುವ ದಾರಿಯಂತೂ ಮುಕ್ತವಾಗಿದೆ!

ಕಪಿಲ್ ಶರ್ಮಾನ ಟೀವಿ ಯ ಆರಂಗೇಟ್ರಂ ಕೂಡಾ ಅಷ್ಟೇನೂ ಸುಲಭವಾಗಿ ಆಗಲಿಲ್ಲ ಎನ್ನುವುದು ಕುತೂಹಲಕರ. 2007ರಲ್ಲಿ ಈತ 'ದಿ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜ್–3' ರಲ್ಲಿ ಭಾಗವಹಿಸಲು ಅಮೃತಸರದಲ್ಲಿ ಆಡಿಷನ್‌ಗೆ ಹೋಗಿದ್ದ. ಆದರೆ ತೀರ್ಪುಗಾರರು ಈತನ ನಟನೆಯನ್ನು ತಿರಸ್ಕರಿಸಿದ್ದರು. ಹಠ ಬಿಡದೆ ದೆಹಲಿಯಲ್ಲಿ ಇನ್ನೊಮ್ಮೆ ಆಡಿಷನ್‌ಗೆ ಹೋದಾಗ ಅಲ್ಲಿ ಆಯ್ಕೆಯಾದ. ನೋಡ ನೋಡುತ್ತಿದ್ದಂತೆಯೇ ಟೀವಿ ಕಾರ್ಯಕ್ರಮದಲ್ಲಿ ಮಿಂಚಿ, ದಿ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜಿಂಗ್‌ನಲ್ಲಿ ಚಾಂಪಿಯನ್ ಕೂಡಾ ಆದ! ಆಗ ಸಿಕ್ಕಿದ ಬಹುಮಾನ ಮೊತ್ತ 10 ಲಕ್ಷ ರೂಪಾಯಿ. ಹಾಗೆ ಟೀವಿಗೆ ಒಗ್ಗಿದ ಕಪಿಲ್‌ಗೆ ಬಳಿಕ 'ಕಾಮಿಡಿ ಸರ್ಕಸ್'ನಲ್ಲಿ ಅವಕಾಶ ಸಿಕ್ಕಿತು. ಅದರಲ್ಲಿ ಉಳಿದವರ ಜತೆಗೆ ಪೈಪೋಟಿಗೆ ಬಿದ್ದು, ಕೊನೆಗೆ ತನ್ನದೇ ಆದ ಸ್ವತಂತ್ರ ಕಾರ್ಯಕ್ರಮ 'ಕಾಮಿಡಿ ನೈಟ್ಸ್' ಶುರು ಮಾಡಿದ. ಈ ಕಾರ್ಯಕ್ರಮದಲ್ಲಿ ಗುತ್ತಿ, ಪಲಕ್, ದಾದಿ, ಪಿಂಕಿ ಭುವಾ ಮುಂತಾದ ಪಾತ್ರಗಳನ್ನು ನಿರ್ವಹಿಸುವ ಇತರ ನಟ–ನಟಿಯರೂ ಕಾರ್ಯಕ್ರಮದ ಯಶಸ್ಸಿಗೆ ಬಹುದೊಡ್ಡ ಕಾಣಿಕೆ ಸಲ್ಲಿಸಿದ್ದಾರೆ. ಗುತ್ತಿ (ಸುನಿಲ್ ಗ್ರೋವರ್) ಜತೆಗೆ ಜಗಳವೂ ಆಗಿ, ಕೆಲಕಾಲ ಆತ ಕಾರ್ಯಕ್ರಮದಿಂದ ಹೊರಬಿದ್ದ ಬಳಿಕ ರಾಜಿಯೂ ಆಗಿದೆ. ಆದರೆ ಕಾರ್ಯಕ್ರಮವನ್ನು ಇನ್ನಷ್ಟು ಚೇತೋಹಾರಿ ಮಾಡುವ ಐಡಿಯಾಗಳಿಗೆ ಈತನ ಬಳಿಯಲ್ಲಿ ಕೊರತೆ ಇರಲಿಲ್ಲ.

2013ರಲ್ಲಿ ಫೋರ್ಬ್ಸ್ ಪ್ರಕಟಿಸಿದ ಇಂಡಿಯನ್ ಸೆಲೆಬ್ರಿಟಿಗಳ ಪಟ್ಟಿಯಲ್ಲಿ 93ನೇ ಸ್ಥಾನದಲ್ಲಿದ್ದ ಈತ, 2014ರ ಪಟ್ಟಿಯಲ್ಲಿ 33ನೇ ಸ್ಥಾನಕ್ಕೆ ಏರಿದ್ದಾನೆ. ದುಬೈನಲ್ಲಿ ನಡೆಸಿದ ಸ್ಟ್ಯಾಂಡಪ್ ಕಾಮಿಡಿ ಕಾರ್ಯಕ್ರಮ ಯಶಸ್ವಿಯಾದ ಬಳಿಕ ಅಮೆರಿಕದಿಂದ ಕರೆ ಬಂದಿದೆ. ಉತ್ತರ ಪ್ರದೇಶ ಉತ್ಸವದಲ್ಲಿ ಅರ್ಧ ಗಂಟೆ ನಿಂತು ಮಾತನಾಡಿದ್ದಕ್ಕೆ 65 ಲಕ್ಷ ರೂಪಾಯಿ ತೆಗೆದುಕೊಂಡನಂತೆ. ದುಬೈನಲ್ಲಿ ಸಿಸಿಎಲ್ ಪಂದ್ಯಾವಳಿಯಲ್ಲಿ ನಿರೂಪಣೆ ಮಾಡಿದ್ದಕ್ಕೆ 1.25 ಕೋಟಿ ರೂಪಾಯಿ ಕೊಟ್ಟರಂತೆ!



ಜನಪ್ರಿಯತೆಯ ಜತೆಗೆ ವಿವಾದಗಳೂ ಈತನ ಬೆನ್ನು ಹತ್ತಿವೆ. ಕಾಮಿಡಿ ನೈಟ್ಸ್‌ನ ಕ್ರಿಯೇಟಿವ್ ಡೈರೆಕ್ಟರ್ ಪ್ರೀತಿ ಸಿಮೋಸ್ ಜತೆ ಮದುವೆಯಾಗುವ ಸುದ್ದಿ ಹುಸಿಯಾಯಿತು. ಇತ್ತೀಚೆಗೆ ಗೆಳತಿ ಭಾವನೀತ್ (ಗಿನ್ನಿ) ಜತೆಗೆ ನಿಶ್ಚಿತಾರ್ಥ ಮುಗಿಸಿರುವ ಸುದ್ದಿ ಬಂದಿದೆ. ಆಸ್ಟ್ರೇಲಿಯಾದಲ್ಲಿ ನೀಡಿದ ಕಾರ್ಯಕ್ರಮವೊಂದರಲ್ಲಿ ಮೌಂಟ್ ಎವರೆಸ್ಟ್ ಭಾರತದಲ್ಲಿದೆ ಎಂದು ಹೇಳಿ ನೇಪಾಳಿಗರ ಸಿಟ್ಟಿಗೆ ಗುರಿಯಾಗಿ, ಟ್ವಿಟ್ಟರ್‌ನಲ್ಲಿ ಕ್ಷಮಾಪಣೆ ಕೋರಿದ. ಸಿಎನ್‌ಎನ್– ಐಬಿಎನ್‌ನವರು ಈತನನ್ನು ಕಳೆದ ವರ್ಷ 'ಇಂಡಿಯನ್ ಆಫ್ ದಿ ಇಯರ್' ಪ್ರಶಸ್ತಿಗೂ ಆಯ್ಕೆ ಮಾಡಿದರು. ಬೆಳ್ಳಿತೆರೆಯ ನಟನೆಯ ಹೊಸ ಅವತಾರ ಈತನನ್ನು ಎಲ್ಲಿಗೆ ಕರೆದೊಯ್ಯುತ್ತದೋ ನೋಡಬೇಕು. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65